ಹಾಗೂ ಸಂಬಂಧಪಟ್ಟವರ ಮೇಲೆ ಇಲಾಖೆಯು ತೆಗೆದುಕೊಂಡ ಕ್ರಮವೇನು ಮತ್ತು ಇದರ ಪರಿಣಾಮದಿಂದ ಸಿಬ್ಬಂದಿ ವರ್ಗದ ನಡತೆ ಬದಲಾಗಿದೆಯೇ?

ಆ) ಶಸ್ತ್ರಚಿಕಿತ್ಸೆಯಲ್ಲಿ ವಿಫಲಗೊಂಡವರಿಗೆ ಹಾಗೂ ಸಾವಿಗೀಡಾದವರಿಗೆ ಸರ್ಕಾರದವರು ಪರಿಹಾರವೇನಾದರೂ ನೀಡುವ ಹಾಗಿದ್ದಲ್ಲಿ ನೀಡುವ ಪರಿಹಾರವೆಷ್ಟು ಮತ್ತು ಕಳೆದ 3 ವರ್ಷಗಳಿಂದೀಚೆಗೆ ನೀಡಿದ ಒಟ್ಟು ಪರಿಹಾರವೆಷ್ಟು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲಾಖೆಗೆ 6 ದೂರುಗಳು ಬಂದಿವೆ, ಇಲಾಖೆಯು ಇಂತಹ ಪ್ರಕರಣಗಳಲ್ಲಿ ವಿಚಾರಣೆ ನಡೆಸಿದಾಗ ಮರಣವು ಸಿಬ್ಬಂದಿ ವರ್ಗದ ತಿರಸ್ಕಾರದಿಂದ ಸಂಭವಿಸಿಲ್ಲವೆಂದು ಸಾಬೀತಾಗಿದೆ.

ಆ) ಸಂತಾನಹರಣ ಶಸ್ತ್ರ ಚಿಕಿತ್ಸೆಯಲ್ಲಿ ವಿಫಲಗೊಂಡವರಿಗೆ ಸರ್ಕಾರ ಪರಿಹಾರಧನ ನೀಡುವ ಅವಕಾಶವಿಲ್ಲಾ. ಆದರೆ ಶಸ್ತ್ರ ಚಿಕಿತ್ಸೆಗೆ ಒಳಪಟ್ಟು ಸಾವೀಗೀಡಾದಲ್ಲಿ ಅವರ ಕುಟುಂಬವರ್ಗದವರಿಗೆ ಸರ್ಕಾರ ರೂ: 10,000-00ಗಳ ಪರಿಹಾರಧನ ನೀಡುವ ಅವಕಾಶವಿದ್ದು, ಈ ಪರಿಹಾರಧನವನ್ನು ದಿನಾಂಕ 1-5-1997ರಿಂದ ರೂ: 50,000-00ಗಳಿಗೆ ಹೆಚ್ಚಿಸಲಾಗಿದೆ. ಕಳೆದ ಮೂರು ವರ್ಷಗಳಿಂದೀಚೆಗೆ ಒಟ್ಟು ರೂ: 14.30 ಲಕ್ಷ ಪರಿಹಾರಧನ ನೀಡಲಾಗಿದೆ.

ವಿಷಯ: ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಉಪಕರಣಗಳನ್ನು ದುರಸ್ತಿಗೊಳಿಸುವುದು.

1009 (1500)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕೆಟ್ಟಿರುವ ಉಪಕರಣಗಳು ಯಾವುವು? ಇವುಗಳನ್ನು ದುರಸ್ತಿ ಮಾಡದಿರಲು ಕಾರಣಗಳೇನು?

ಆ) ದುರಸ್ತಿ ಮಾಡಲು ತಗಲುವ ಖರ್ಚು ಎಷ್ಟು? ಸದರಿ ದುರಸ್ತಿ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):

ಅ) 1. ಇಮೇಜ್ ಇಂಟೆನ್‌ಸಿ ಫಾರ್ ಟೆಲಿವಿಷನ್ ಯೂನಿಟ್ - 1 (ಒಂದು)

2. ಎಂಡೋಸ್ಕೊಪಿ ಇವಿಇ ಪ್ರೊಸೆಸರ್ - 1 (ಒಂದು)

ಇವುಗಳನ್ನು ದುರಸ್ತಿ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ದುರಸ್ತಿ ಮಾಡಲು ತಗಲುವ ಅಂದಾಜು ವೆಚ್ಚದ ವಿವರಗಳು ಈ ಕೆಳಗಿನಂತಿವೆ.

1. ಇಮೇಜ್ ಇಂಟೆನ್ ಸಿಫಾರ್ ಟೆಲಿವಿಷನ್ ಯೂನಿಟ್ - ರೂ. 34,200-00

2. ಎಂಡೋಸ್ಕೊಪಿ ಇವಿಇ ಪ್ರೊಸೆಸರ್ - 958 ಯುಎಸ್ ಡಾಲರ್(ಸಿಐಎಫ್) (ರೂ. 76,362)

ಇವುಗಳ ದುರಸ್ತಿ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ವಿಷಯ: ದ.ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಜವಹಾರ ರೋಜಗಾರ್ ಯೋಜನೆಯ ಅನುಷ್ಠಾನ

10 10 (1498)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ದ.ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಜವಾಹರ್ ರೋಜಗಾರ್ ಯೋಜನೆಯಡಿ ಎಷ್ಟು ಜನ ನಿರುದ್ಯೋಗಿಗಳಿಗೆ (ಎಸ್.ಎಸ್.ಎಲ್.ಸಿ ಮತ್ತು ಪದವೀಧರರು) ಸ್ವಯಂ ಉದ್ಯೋಗಕ್ಕಾಗಿ ಸಾಲ ನೀಡಲಾಗಿದೆ.

ಆ) ಈ ಆಯ್ಕೆಯಲ್ಲಿ ಇರುವ ಸದಸ್ಯರುಗಳು ಯಾರು?

ಇ) ಅರ್ಹ ಫಲಾನುಭವಿಗಳಿಗೆ ಬ್ಯಾಂಕಿನವರು ಸಾಲ ಮಂಜೂರಾತಿ ಮಾಡುವ ಸಮಯದಲ್ಲಿ ಕಿರುಕುಳ ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು)

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಆ) (ಅ) ಪ್ರಶ್ನೆ ರೀತ್ಯಾ ಉದ್ಭವಿಸುವುದಿಲ್ಲ.